ಬೆಂಗಳೂರು ನಗರ ವಿಶ್ವವಿದ್ಯಾನಿಲಯ
BENGALURU CITY UNIVERSITY
Office of the Registrar Evaluation, Jnana Jyothi Central College Campus, Dr Ambedkar Veedhi, Bengaluru – 560001
Ph: 080-22295559/29572003 Mail: registrarevlubcu@gmail.com/regev@bcu.ac.in

ಸಂಖ್ಯೆ: ಬೆಂ.ನ.ವಿ./ಪ.ವಿ./NAD/2024-25/1479 ದಿನಾಂಕ: 11.06.2024

## ಸುತ್ತೋಲೆ

ವಿಷಯ: ತಮ್ಮ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಅಂಕಪಟ್ಟಿ ಮತ್ತು ಪದವಿ ಪ್ರಮಾಣಪತ್ರಗಳನ್ನು NADನಲ್ಲಿ ಅಪ್‌ಲೋಡ್ ಮಾಡಿ ಸಹಮತಿ ನೀಡುವ ಕುರಿತು.

ಉಲ್ಲೇಖ: 1. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಇಡಿ29EGOV2023, ಬೆಂಗಳೂರು, ದಿನಾಂಕ: 16.10.2023

2. ಪತ್ರ ಸಂಖ್ಯೆ: DPAR-CEG0NAD(ADMN)/2/2023-CEG ದಿನಾಂಕ: 04.06.2024

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿ ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಇವರು ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿಗಳಿಗೆ ಉಲ್ಲೇಖ (2)ರಲ್ಲಿ ತಿಳಿಸಿರುವ ಪತ್ರವನ್ನು ಬರೆದು ಕರ್ನಾಟಕ ಸರ್ಕಾರದ "ಯುವ ನಿಧಿ" ಯೋಜನೆಗೆ ನ್ಯಾಷನಲ್ ಅಕಾಡೆಮಿಕ್ ಡೆಪೋಸಿಟರಿ (NAD) ಡೇಟಾಬೇಸ್ ಅನ್ನು ಬಳಸಲಾಗುತ್ತಿರುತ್ತದೆ. ಅದರನ್ವಯ ಇ-ಆಡಳಿತ ಕೇಂದ್ರದ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ (SSP) ಮತ್ತು ರಾಜ್ಯ ಹಾಸ್ಟಲ್ ತಂತ್ರಾಂಶ (SHP) ಗಳಲ್ಲಿ ಒದಗಿಸಲಾಗುತ್ತಿರುವ ಸೇವಾ ಪ್ರಕ್ರಿಯೆಗಳನ್ನು ವಿದ್ಯಾರ್ಥಿಗಳಿಗೆ ಸುಲಭಗೊಳಿಸುವ ನಿಟ್ಟಿನಲ್ಲಿ ಪ್ರಸಕ್ತ ಸಾಲಿನಿಂದ NAD ಡೇಟಾಬೇಸ್ ಅನ್ನು ವಿನಿಯೋಗಿಸಲು ತೀರ್ಮಾನಿಸಲಾಗಿರುತ್ತದೆ. ಈ ನಿಟ್ಟಿನಲ್ಲಿ ವಿಶ್ವವಿದ್ಯಾಲಯದಲ್ಲಿನ ವಿದ್ಯಾರ್ಥಿಗಳ ಕಳೆದ 04 ಶೈಕ್ಷಣಿಕ ವರ್ಷಗಳಾದ 2019-2020, 2020-2021, 2021-2022 ಮತ್ತು 2022-2023 ನೇ ಸಾಲಿನ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ದಿನಾಂಕ: 24.06.2024 ರೊಳಗೆ NAD ನಲ್ಲಿ ಸಂಪೂರ್ಣವಾಗಿ ಅಪ್‌ಲೋಡ್ ಮಾಡಲು ಸಂಬಂಧಪಟ್ಟವರಿಗೆ ಸೂಚಿಸಬೇಕೆಂದು ತಿಳಿಸಿರುತ್ತಾರೆ.

ಮುಂದುವರೆದು, ಉಲ್ಲೇಖದಲ್ಲಿ ತಿಳಿಸಿರುವಂತೆ NAD ಡಿಜಿಲಾಕರ್ ನಿಂದ ವಿತರಿಸಿರುವ ವಿದ್ಯಾರ್ಥಿಗಳ ಶೈಕ್ಷಣಿಕ ದಾಖಲೆಗಳನ್ನು ಮೂಲ ಭೌತಿಕ ದಾಖಲೆಗಳೆಂದು ಪರಿಗಣಿಸಲು ಉನ್ನತ ಶಿಕ್ಷಣ ಇಲಾಖೆಯು ಸರ್ಕಾರಿ ಆದೇಶವನ್ನು ಈಗಾಗಲೇ ಹೊರಡಿಸಿರುತ್ತಾರೆ. ಆದರೆ, ತಮ್ಮ ವಿಶ್ವವಿದ್ಯಾಲಯದ ಕೆಲ ಸ್ವಾಯತ್ತ ಕಾಲೇಜುಗಳಲ್ಲಿ NAD ಡಿಜಿಲಾಕರ್ ನ ಶೈಕ್ಷಣಿಕ ದಾಖಲೆಗಳನ್ನು ಮಾನ್ಯವಿಲ್ಲವೆಂದು ತಿಳಿಸಿರುವುದು ಗಮನಿಸಲಾಗಿರುತ್ತದೆ. ಆದ್ದರಿಂದ, ಉನ್ನತ ಶಿಕ್ಷಣ ಇಲಾಖೆಯ ಸರ್ಕಾರಿ ಆದೇಶದನ್ವಯ NAD ಡಿಜಿಲಾಕರ್ ನಿಂದ ವಿತರಿಸಿರುವ ವಿದ್ಯಾರ್ಥಿಗಳ ಶೈಕ್ಷಣಿಕ ದಾಖಲೆಗಳನ್ನು ಮಾನ್ಯವೆಂದು ಪರಿಗಣಿಸಲು ತಮ್ಮ ಅಧೀನದಲ್ಲಿರುವ ಎಲ್ಲಾ ಸ್ವಾಯತ್ತ ಕಾಲೇಜುಗಳಿಗೆ ನಿರ್ದೇಶಿಸಲು ತಿಳಿಸಲಾಗಿದೆ ಮತ್ತು ಕುರಿತು ಅಗತ್ಯ ಕ್ರಮ ಕೈಗೊಂಡು ಅನುಪಾಲನ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿದೆ.

ಆದುದರಿಂದ, ಸರ್ಕಾರ ತಿಳಿಸಿರುವಂತೆ NAD ಡಿಜಿಲಾಕರ್ ನಿಂದ ವಿತರಿಸಿರುವ ವಿದ್ಯಾರ್ಥಿಗಳ ಶೈಕ್ಷಣಿಕ ದಾಖಲೆಗಳನ್ನು ಮಾನ್ಯವೆಂದು ಪರಿಗಣಿಸಲು ಈ ಮೂಲಕ ತಿಳಿಸಲಾಗಿದೆ. ಈ ಸೂಚನೆಗಳನ್ನು ತಕ್ಷಣದಿಂದ ಪಾಲಿಸಲು ಕೋರಿದೆ.

ಕುಲಸಚಿವರು (ಮೌಲ್ಯಮಾಪನ)
ಕುಲಸಚಿವರು (ಮೌಲ್ಯಮಾಪನ)
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಸೆಂಟ್ರಲ್ ಕಾಲೇಜು ಕ್ಯಾಂಪಸ್
ಬೆಂಗಳೂರು – 560 001

ಗೆ,

ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ಸಂಯೋಜಿತವಾಗಿರುವ ಎಲ್ಲಾ ಸ್ವಾಯತ್ತ ಕಾಲೇಜು.
ಪ್ರಾಂಶುಪಾಲರುಗಳು, ಬೆಂಗಳೂರು.

ಪ್ರತಿಗಳು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕೊಠಡಿ ಸಂಖ್ಯೆ: 655, 6ನೇ ಮಹಡಿ, 2ನೇ ಗೇಟ್, ಬಹುಮಹಡಿ ಕಟ್ಟಡ, ಡಾ. ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 01.
2. ಕುಲಪತಿಗಳು / ಕುಲಸಚಿವರು / ಕುಲಸಚಿವರು (ಮೌಲ್ಯಮಾಪನ) ರವರ ಆಪ್ತ ಕಾರ್ಯದರ್ಶಿಗಳು ಮತ್ತು ವಿತ್ತಾಧಿಕಾರಿಯವರ ಆಪ್ತ ಸಹಾಯಕರು, ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು.
3. ದಿ ಪ್ರೋಜೆಕ್ಟ್ ಮ್ಯಾನೇಜರ್, UUCMS, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಪ್ರಸನ್ನ ಕುಮಾರ ಬ್ಲಾಕ್, ಗಾಂಧಿ ನಗರ, ಬೆಂಗಳೂರು – 560001.